# A

**24718** **120 MINUTES**

1. ಇದು ಪ್ರಗತಿಶೀಲ ಪಂಥಕ್ಕೆ ಸೇರಿದ ಕಥಾ ಸಂಕಲನ
   A) ಕೂರ್ಮಾವತಾರ B) ಹುಳಿಮಾವಿನ ಮರ
   C) ರೂಪಸಿ D) ಬಯಲಾಟದ ಭೀಮಣ್ಣ

2. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ?
   A) ದುಡಿತವೇ ನನ್ನ ದೇವರು : ಸಿದ್ಧಲಿಂಗಯ್ಯ
   B) ಭಾವಜೀವ : ಚೆನ್ನವೀರ ಕಣವಿ
   C) ಊರುಕೇರಿ : ಎಂ. ಗೋಪಾಲಕೃಷ್ಣ ಅಡಿಗ
   D) ನೆನಪಿನ ಗಣಿಯಿಂದ : ಕಯ್ಯಾರ ಕಿಞ್ಞಣ್ಣ ರೈ

3. ಈ ಹೇಳಿಕೆಗಳನ್ನು ಗಮನಿಸಿರಿ
   1) ವಿಚ್ಛೇದಕ ಸ್ಖಾಲಿತ್ಯ ಎಂಬುದು ಎರಡು ಪ್ರತಿಗಳು ಬೇರೆ ಬೇರೆ ಮೂಲದವು ಎಂಬುದನ್ನು ತೋರಿಸುವ ಸ್ಖಾಲಿತ್ಯ
   2) ಏಕೈಕ ಪ್ರತಿ ಇದ್ದಾಗ ಉಪಯೋಗಕ್ಕೆ ಬರುವುದೆ ಸಂಯೋಜಕ ಸ್ಖಾಲಿತ್ಯ
   ಸರಿಯಾದ ಉತ್ತರ

   A) ಎರಡು ಹೇಳಿಕೆಗಳೂ ಸರಿ
   B) ಎರಡು ಹೇಳಿಕೆಗಳೂ ತಪ್ಪು
   C) ಒಂದನೇ ಹೇಳಿಕೆ ಸರಿ, ಎರಡನೇ ಹೇಳಿಕೆ ತಪ್ಪು
   D) ಒಂದನೇ ಹೇಳಿಕೆ ತಪ್ಪು, ಎರಡನೇ ಹೇಳಿಕೆ ಸರಿ

4. 'ನೀನುಟಿದೊಡೆ ಸಾವವಳ್, ಎನಗೆ ಮಿಕ್ಕ ಗಂಡರ್ ಸವಸೋದರರ್' – ಈ ಮಾತನ್ನು ಆಡಿದ ಪಾತ್ರ
   A) ಅಭಯಮತಿ B) ಅಮೃತಮತಿ C) ಸುನಂದೆ D) ಚಂದ್ರಮತಿ

5. ಮನೆಯಿಂದಲೇ ಹಣ ವರ್ಗಾವಣೆ ಮಾಡುವ ಸೌಲಭ್ಯವನ್ನು ಏನೆಂದು ಕರೆಯುತ್ತಾರೆ?
   A) ಇ–ಬ್ಯಾಂಕಿಂಗ್ B) ಇ–ಮೇಲ್ C) ಇ–ಕಾಮರ್ಸ್ D) ಇ–ಪಬ್ಲಿಷಿಂಗ್

6. ಶಬ್ದಮಣಿದರ್ಪಣವನ್ನು ಸಂಪಾದಿಸಿದವರು
   A) ಆರ್. ನರಸಿಂಹಾಚಾರ್ B) ಆರ್.ಸಿ. ಹಿರೇಮಠ
   C) ಟಿ.ಎಸ್. ವೆಂಕಣ್ಣಯ್ಯ D) ಡಿ.ಎಲ್. ನರಸಿಂಹಾಚಾರ್

7. ಇವುಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ?
   A) ಕರ್ಣಾಟಕ ಪಂಚತಂತ್ರ : ದುರ್ಗಸಿಂಹ
   B) ಲೀಲಾವತಿ ಪ್ರಬಂಧ : ಜನ್ನ
   C) ತಿರುನೀಲ ಕಂಠರ ರಗಳೆ : ಎರಡನೇ ನಾಗವರ್ಮ
   D) ಧರ್ಮಾಮೃತ : ಹರಿಹರ

8. ಇವು ಪೂರ್ವ ಪದಾರ್ಥ ಪ್ರಧಾನ ಸಮಾಸಕ್ಕೆ ಉದಾಹರಣೆಗಳು
   A) ನಿಡುಮೂಗ, ಉಡುಗೊರೆ B) ಅಂಗೈ, ಮುಂದಲೆ
   C) ಹಾಡುವ ತುಂಬಿ, ಕೂರಸಿ D) ಕೆರೆಕಟ್ಟೆ ಬಾವಿಗಳು, ಗಿಡಮರ ಬಳ್ಳಿಗಳು

9. ಚಂದ್ರಕಾಂತ ಕುಸನೂರ ಅವರು ಬರೆದ ನಾಟಕ

A) ಕನಸು  B) ತುಕ್ರನ ಕನಸು
C) ಟಿ. ಪ್ರಸನ್ನನ ಗೃಹಸ್ಥಾಶ್ರಮ  D) ನರಕದಲ್ಲಿ ನರಸಿಂಹ

10. ಇವುಗಳಲ್ಲಿ ರಂಜಾನ್ ದರ್ಗಾ ಅವರ ಕವನ ಸಂಕಲನ

A) ಮುಂಜಾವಿನ ಕೊರಳು  B) ಕರಿನೆಲದ ಕಲೆಗಳು
C) ಗುಲಾಮಗೀತೆ  D) ಹೊಕ್ಕುಳಲ್ಲಿ ಹೂವಿದೆ

11. ಇವುಗಳಲ್ಲಿ ಯಾವುದು ಕಾವ್ಯಕ್ಕೆ ಕಾರಣ

A) ಅಮಂಗಲ ನಿವಾರಣೆ  B) ಕಾವ್ಯ ಪರಿಚಯ
C) ಅರ್ಥ ಸಂಪಾದನೆ  D) ಕಾಂತಾ ಸಂಮಿತಿಯ ಉಪದೇಶ

12. ಬಂಡಾಯ ಆಶಯಗಳನ್ನು ಒಳಗೊಂಡ ರಚನೆ

A) ಧೂಮಕೇತು  B) ರಾಜಯೋಗಿ  C) ಒಂಟಿ ನಕ್ಷತ್ರ  D) ಚಪ್ಪಲಿಗಳು

13. ಮೂಲ ದಕ್ಷಿಣ ದ್ರಾವಿಡ ಭಾಷೆಯಿಂದ ಕವಲೊಡೆದು ಬಂದ ಭಾಷೆಗಳು

A) ಕೊಡವ, ಬಡಗ  B) ಪರ್ಜಿ, ಕೊಂಡ
C) ಕೊಲಾಮಿ, ನಾಯ್ಕಿ  D) ಪೆಂಗೊ, ಮಂಡ

14. ಕಾವ್ಯ ಮೀಮಾಂಸೆಯ ಕ್ಷೇತ್ರಕ್ಕೆ ಮೌಲಿಕ ಕೊಡುಗೆಯನ್ನು ನೀಡಿದವರು

A) ಎಂ. ಚಿದಾನಂದಮೂರ್ತಿ  B) ಎಂ.ಎಂ. ಕಲ್ಬುರ್ಗಿ
C) ತೀ.ನಂ. ಶ್ರೀಕಂಠಯ್ಯ  D) ಕೆ. ಕುಶಾಲಪ್ಪ ಗೌಡ

15. ಭಾರತೀಯ ಕಾವ್ಯ ಮೀಮಾಂಸೆಯ ಕ್ಷೇತ್ರದಲ್ಲಿ ರಸಸಿದ್ಧಾಂತವನ್ನು ಕುರಿತು ಚರ್ಚಿಸಿದವರು

A) ವಾಮನ, ಮಮ್ಮಟ  B) ಭರತ, ಸಾಳ್ವ
C) ದಂಡಿ, ಭಾಮಹ  D) ಆನಂದವರ್ಧನ, ಕ್ಷೇಮೇಂದ್ರ

16. ಗವೇಷಣೆ, ಅಭ್ಯಾಸ – ಈ ಪದಗಳಲ್ಲಿ ಕಾಲಾಂತರದಲ್ಲಿ ನಡೆದ ಅರ್ಥವ್ಯತ್ಯಾಸದ ಬಗೆ ಯಾವುದು

A) ಅರ್ಥ ಸಂಕೋಚ  B) ಅರ್ಥೋತ್ಕರ್ಷ
C) ಅರ್ಥಾಂತರ  D) ಅರ್ಥವಿಸ್ತಾರ

17. ಇವುಗಳಲ್ಲಿ ಸಂಭಾವನಾರ್ಥಕ ಕ್ರಿಯಾಪದ

A) ನೋಡೆನು, ಕೇಳೆನು  B) ನೋಡಿಯೇನು, ಕೇಳಿಯೇನು
C) ನೋಡಲಿ, ಕೇಳಲಿ  D) ನೋಡಿರಿ, ಕೇಳಿರಿ

18. 'Poetry is not turning loose of emotion; it is escape from emotion' ಎಂದು ಹೇಳಿದ ಕಾವ್ಯ ಮೀಮಾಂಸಕ.

A) ಟಿ.ಎಸ್. ಎಲಿಯಟ್  B) ಮ್ಯಾಥ್ಯೂ ಅರ್ನಾಲ್ಡ್
C) ರೇಮಂಡ್ ವಿಲಿಯಮ್ಸ್  D) ಎಡ್ವರ್ಡ್ ಸೈದ್

19. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುವುದಿಲ್ಲ.

A) ಅಷ್ಟ ಷಟ್ಪದಿ : ಸಾನೆಟ್
B) ಪ್ರಗಾಥ : ಓಡ್
C) ಸರಳ ರಗಳೆ : ಚತುರ್ದಶಪದಿ
D) ಕಂದ : ಮಾತ್ರಾ ಛಂದಸ್ಸು

20. ಇವುಗಳಲ್ಲಿ ಭಾಷಾಂತರಿತ ಕೃತಿಗಳು

A) ಕೆಂಪು ಮೀನು, ಹಗ್ಗ
B) ಇಂದಿರಾ ಬಾಯಿ, ಶಾಂತಲ
C) ಸಂಸ್ಕಾರ, ಶೋಕಚಕ್ರ
D) ಭೂಮಿಗೀತ, ಸಾವಿರಾರು ನದಿಗಳು

21. ಇವುಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ?

A) ನಡೆವರೆಡಹದೆ ಕುಳಿತರೆಡಹುವರೆ? : ರತ್ನಾಕರ ವರ್ಣಿ
B) ಪದನಜಿದು ನುಡಿಯಲುಂ ನುಡಿದುದನ್
ಅಜಿದು ಆರಯಲುಂ ಆರ್ಪರ್ ನಾಡವರ್ಗಳ್ : ಪಂಪ
C) ಭಾಗಮನ್ ಆಸೆಪಟ್ಟು ಅಳಿಪಿ ಬೇಟ್ಟುದು ನಿನ್ನಯ
ಕಲ್ತ ವಿದ್ದೆ, ನೀನಾಗಳುಂ ಅಣ್ಣ ಬೇಡಿದಪೆ : ರನ್ನ
D) ಪಟಿಗಂ ಪಾಪಕ್ಕಂ ಅಂಜದವರ್ ಏಗೆಯ್ಯರ್ : ನಾಗಚಂದ್ರ

22. ಇವರು ನವ್ಯ ಪಂಥದ ಸಾಹಿತಿಗಳು

1) ಶ್ರೀಕೃಷ್ಣ ಆಲನಹಳ್ಳಿ, ಶಾಂತಿನಾಥ ದೇಸಾಯಿ
2) ನಿರಂಜನ, ಬಸವರಾಜ ಕಟ್ಟೀಮನಿ
3) ಪಿ. ಲಂಕೇಶ, ಯಶವಂತ ಚಿತ್ತಾಲ
4) ಕು. ವೀರಭದ್ರಪ್ಪ, ಸಿದ್ಧಲಿಂಗಯ್ಯ

ಸರಿಯಾದ ಉತ್ತರ

A) 1 ಮತ್ತು 4
B) 1 ಮತ್ತು 3
C) 2 ಮತ್ತು 4
D) 2 ಮತ್ತು 3

23. ಸರಳ ರಗಳೆಯಲ್ಲಿರುವ ಒಂದು ಕಾವ್ಯ

A) ಕೆ.ಎಸ್. ನಿಸಾರ್ ಅಹಮದ್ ಅವರ ರಂಗೋಲಿ ಮತ್ತು ಮಗ
B) ಸು.ರಂ. ಎಕ್ಕುಂಡಿ ಅವರ ದಾಸಿಮಯ್ಯ ಮತ್ತು ಬೆಕ್ಕು
C) ಕುವೆಂಪು ಅವರ ಚಿತ್ರಾಂಗದಾ
D) ಗೋವಿಂದ ಪೈ ಅವರ ಹುಲ್ಲು ಕಟಿಗ

24. ಇವರು ಶಾಸನ ಕ್ಷೇತ್ರದ ತಜ್ಞರು

A) ಎಂ. ಚಿದಾನಂದಮೂರ್ತಿ
B) ಜಿ.ಎಸ್. ಅಮೂರ
C) ಅರವಿಂದ ಮಾಲಗತ್ತಿ
D) ಚಂದ್ರಕಾಂತ ಕುಸನೂರ

25. ಮಂದರಧರಗಣಂ / ಬಂದಿರ್ಕಾಱಂತ್ಯದೊಳ್
ಕುಂದದೆ ನೆಲಸುಗೆ ಮದನಹರಂ.... – ಇದು ಯಾವ ಛಂದೋರೂಪದ ಲಕ್ಷಣವಾಗಿದೆ.

A) ಮಾತ್ರಾ ಷಟ್ಪದಿ
B) ಅಕ್ಕರಿಕೆ
C) ಅಕ್ಕರ
D) ಅಂಶ ಷಟ್ಪದಿ

26. ಇವುಗಳಲ್ಲಿ ಸಮಾಸ ಪದ

A) ಬಳೆಗಾರ
B) ಹೊಳೆನೀರು
C) ಅಂಜಿಕೆ
D) ಹಣವಂತ

27. ‘ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ’ ಎಂಬ ಸಂಶೋಧನ ಕೃತಿಯ ಕರ್ತೃ

A) ಶಂಬಾ ಜೋಶಿ
B) ಕೆ.ಜಿ. ಕುಂದಣಗಾರ
C) ಎಚ್. ತಿಪ್ಪೇರುದ್ರ ಸ್ವಾಮಿ
D) ಜಿ. ವೆಂಕಟಸುಬ್ಬಯ್ಯ

28. ಈ ಹೇಳಿಕೆಗಳನ್ನು ಗಮನಿಸಿರಿ

1) ಒಬ್ಬ ಸಂಶೋಧಕ ಮೂಲ ಆಕರಗಳಿಂದ ರೂಪಿಸಿದ ಕೃತಿ ಇನ್ನೊಬ್ಬರಿಗೆ ಆನುಷಂಗಿಕ ಸಾಮಗ್ರಿಯಾಗಿರುತ್ತದೆ.
2) ಆನುಷಂಗಿಕ ಸಾಮಗ್ರಿಯಲ್ಲಿ ದೊರೆಯುವ ಸಾಮಗ್ರಿಯನ್ನೇ ಸಂಶೋಧಕನು ಆಧಾರವಾಗಿ ಸ್ವೀಕರಿಸಬಹುದು.

ಸರಿಯಾದ ಉತ್ತರ

A) ಈ ಎರಡು ಹೇಳಿಕೆಗಳೂ ಸರಿ
B) ಎರಡು ಹೇಳಿಕೆಗಳೂ ತಪ್ಪು
C) ಒಂದನೇ ಹೇಳಿಕೆ ಸರಿ, ಎರಡನೇ ಹೇಳಿಕೆ ತಪ್ಪು
D) ಒಂದನೇ ಹೇಳಿಕೆ ತಪ್ಪು, ಎರಡನೇ ಹೇಳಿಕೆ ಸರಿ

29. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ?

A) ಪ್ರಭುಲಿಂಗ ಲೀಲೆ : (ಸಂ) ಬಿ.ಎಂ. ಶ್ರೀಕಂಠಯ್ಯ
B) ಸಾಹಸಭೀಮ ವಿಜಯ : (ಸಂ) ಆರ್.ಸಿ. ಹಿರೇಮಠ
C) ಕವಿರಾಜ ಮಾರ್ಗ : (ಸಂ) ಎಂ. ಮರಿಯಪ್ಪ ಭಟ್ಟ
D) ವಡ್ಡಾರಾಧನೆ : (ಸಂ) ಡಿ.ಎಲ್. ನರಸಿಂಹಾಚಾರ್

30. ಇವುಗಳಲ್ಲಿ ಪಿಹೆಚ್.ಡಿ. ಮಹಾಪ್ರಬಂಧಗಳು

1) ನಾಡೋಜ ಪಂಪ, ಕೆಲವು ಕನ್ನಡ ಕವಿಗಳ ಜೀವನ, ಕಾಲ ವಿಚಾರ
2) ಛಂದೋಗತಿ, ಮಹಾಕವಿ ರಾಘವಾಂಕ
3) ಕನ್ನಡದಲ್ಲಿ ಭಾವಗೀತೆ, ಕವಿರಾಜಮಾರ್ಗ ಪರಿಸರದ ಸಾಹಿತ್ಯ
4) ಸೌಂದರ್ಯ ಸಮೀಕ್ಷೆ, ಶರಣರ ಅನುಭಾವ ಸಾಹಿತ್ಯ

ಸರಿಯಾದ ಉತ್ತರ

A) 1 ಮತ್ತು 2
B) 1 ಮತ್ತು 3
C) 3 ಮತ್ತು 4
D) 2 ಮತ್ತು 4

31. ಇವುಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ.

A) ಕನ್ನಡ ಭಾಗವತ : ಚಾಟು ವಿಠಲನಾಥ
B) ಮೋಹನ ತರಂಗಿಣಿ : ರತ್ನಾಕರವರ್ಣಿ
C) ಕುಮಾರ ರಾಮನ ಸಾಂಗತ್ಯ : ಸಂಚಿಯ ಹೊನ್ನಮ್ಮ
D) ಸುಕುಮಾರ ಚರಿತೆ : ರಾಘವಾಂಕ

32. ಇದು ‘ಲಲಿತ ಪ್ರಬಂಧ’ ಪ್ರಕಾರಕ್ಕೆ ಸೇರಿದ ಕೃತಿ

A) ಯಾನ
B) ಅಲೆಯುವ ಮನ
C) ಕಾಕನಕೋಟೆ
D) ಉರಿಯನಾಲಿಗೆ

33. ‘ಇಮ್ಯಾಜಿನೇಶನ್’ನಲ್ಲಿ ಪ್ರೈಮರಿ ಮತ್ತು ಸೆಕೆಂಡರಿ ಎಂದು ಇಬ್ಬಗೆಗಳನ್ನು ಗುರುತಿಸಿದವರು

A) ಶೆಲ್ಲಿ
B) ಅರ್ನಾಲ್ಡ್
C) ಕೋಲ್‌ರಿಜ್
D) ಹೊರೇಸ್

34. ಬಸವರಾಜ ಕಟ್ಟೀಮನಿ ಅವರ ಕಾದಂಬರಿಗಳು
1) ಸ್ವಾತಂತ್ರ್ಯದೆಡೆಗೆ, ಮೋಹದ ಬಲೆಯಲ್ಲಿ 2) ಜೀತದ ಜೀವ, ಬೆಂಕಿಯ ಬಲೆ
3) ತಾಯಿಯ ಕರುಳು, ಗಾಜಿನ ಮನೆ 4) ದ್ರೋಹಿ, ಜರತಾರಿ ಜಗದ್ಗುರು
ಸರಿಯಾದ ಉತ್ತರ

A) 1 ಮತ್ತು 4 B) 2 ಮತ್ತು 3 C) 3 ಮತ್ತು 4 D) 1 ಮತ್ತು 2

35. ಇವುಗಳಲ್ಲಿ ಸಾಮಾಜಿಕ ಉಪಭಾಷೆ
A) ರಾಯಚೂರು ಕನ್ನಡ B) ಮಂಗಳೂರು ಕನ್ನಡ
C) ಗುಲ್ಬರ್ಗ ಕನ್ನಡ D) ಸೋಲಿಗರ ಕನ್ನಡ

36. ವೀರರಸದ ಸ್ಥಾಯಿಭಾವ
A) ಉತ್ಸಾಹ B) ಗರ್ವ C) ಉಗ್ರತೆ D) ಕ್ರೋಧ

37. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ?
A) ಚಿತ್ರತುರಗ ನ್ಯಾಯ : ಭರತ
B) ಭಾವಕತ್ವ, ಭೋಜಕತ್ವ : ಭಟ್ಟನಾಯಕ
C) ರಸಾಸ್ವಾದಕ್ಕೆ ಅಡ್ಡಿಯಾಗುವ ಸಪ್ತ ವಿಘ್ನಗಳು : ಭಟ್ಟಲೊಲ್ಲಟ
D) ರೀತಿಯೇ ಕಾವ್ಯದ ಆತ್ಮ : ದಂಡಿ

38. ಇವುಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ?
A) ಅಂಶಗಣದಿಂದ ಮಾತ್ರಾಗಣಕ್ಕೆ ತಿರುಗಿದುದು : ಷಟ್ಪದಿ
B) ವರ್ಣಗಣ ಪ್ರಧಾನ : ಖ್ಯಾತ ಕರ್ಣಾಟಕ ವೃತ್ತಗಳು
C) ಅಂಶಲಯ ಪ್ರಧಾನ : ಕಂದ
D) ಮಾತ್ರಾಲಯ ಪ್ರಧಾನ : ರಗಳೆ

39. 'ತಾಳಮದ್ದಳೆ' ಪ್ರಕಾರದಲ್ಲಿ ಹೆಸರಾಂತ ಕಲಾವಿದರು
A) ವೇಣುಗೋಪಾಲ ಕಾಸರಗೋಡು B) ಕೆ. ಕುಶಾಲಪ್ಪ ಗೌಡ
C) ಸತ್ಯಾನಂದ ಪಾತ್ರೋಟ D) ಡಾ. ರಮಾನಂದ ಬನಾರಿ

40. ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮವನ್ನು ಗುರುತಿಸಿರಿ
A) ಶಬರಶಂಕರ ವಿಳಾಸ, ಧರ್ಮಾಮೃತ, ವಡ್ಡಾರಾಧನೆ, ಕಬ್ಬಿಗರ ಕಾವ
B) ವಡ್ಡಾರಾಧನೆ, ಧರ್ಮಾಮೃತ, ಕಬ್ಬಿಗರ ಕಾವ, ಶಬರಶಂಕರ ವಿಳಾಸ
C) ಕಬ್ಬಿಗರ ಕಾವ, ಶಬರಶಂಕರ ವಿಳಾಸ, ಧರ್ಮಾಮೃತ, ವಡ್ಡಾರಾಧನೆ
D) ಧರ್ಮಾಮೃತ, ವಡ್ಡಾರಾಧನೆ, ಶಬರಶಂಕರ ವಿಳಾಸ, ಕಬ್ಬಿಗರ ಕಾವ

41. ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮವನ್ನು ಗುರುತಿಸಿರಿ
A) ವಠಾರ, ಮಾದ್ರಿಯ ಚಿತೆ, ಗಿಳಿವಿಂಡು, ಐಕ್ಯಗಾನ
B) ಮಾದ್ರಿಯ ಚಿತೆ, ಐಕ್ಯಗಾನ, ವಠಾರ, ಗಿಳಿವಿಂಡು
C) ಐಕ್ಯಗಾನ, ವಠಾರ, ಗಿಳಿವಿಂಡು, ಮಾದ್ರಿಯ ಚಿತೆ
D) ಗಿಳಿವಿಂಡು, ಮಾದ್ರಿಯ ಚಿತೆ, ಐಕ್ಯಗಾನ, ವಠಾರ

42. ಇವುಗಳಲ್ಲಿ ಪಾಶ್ಚಾತ್ಯ ಕಾವ್ಯಮೀಮಾಂಸೆಯ ಪರಿಕಲ್ಪನೆಗಳು

A) ವ್ಯಕ್ತಿತ್ವ ನಿರಸನ, ಪರಂಪರೆ ಮತ್ತು ವ್ಯಕ್ತಿ ಪ್ರತಿಭೆ
B) ಗುಣೀಭೂತ ವ್ಯಂಗ್ಯ, ಸ್ವಭಾವೋಕ್ತಿ
C) ಅಲಂಕಾರ ಧ್ವನಿ, ಕಾವ್ಯ ಪ್ರತಿಮೆ
D) ರೀತಿ ಸಿದ್ಧಾಂತ, ವಸ್ತು ಪ್ರತಿರೂಪ

43. ಎ.ಎನ್. ಮೂರ್ತಿರಾಯರ ಆತ್ಮಕಥೆ

A) ಸ್ಮೃತಿ ಪಟಲದಿಂದ B) ಹೋರಾಟದ ಬದುಕು
C) ಸಂಜೆಗಣ್ಣಿನ ಹಿನ್ನೋಟ D) ಗವರ್ಮೆಂಟ್ ಬ್ರಾಹ್ಮಣ

44. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ?

A) ಮಹಾಬ್ರಾಹ್ಮಣ : ಎಂ.ಎಸ್. ಪುಟ್ಟಣ್ಣ
B) ರೂಪದರ್ಶಿ : ಗುಲ್ವಾಡಿ ವೆಂಕಟರಾವ್
C) ದೂರದ ಬೆಟ್ಟ : ಶಾಂತಿನಾಥ ದೇಸಾಯಿ
D) ವಾಲ್ಮೀಕಿ ವಿಜಯ : ಕೆರೂರು ವಾಸುದೇವಾಚಾರ್ಯ

45. 'ಸಂಸ್ಕಾರ' ಕಾದಂಬರಿಯನ್ನು ಹಿಂದಿಗೆ ಭಾಷಾಂತರಿಸಿದವರು

A) ಗೀತಾ ನಾಗಭೂಷಣ B) ಚಂದ್ರಕಾಂತ ಕುಸನೂರ
C) ವೀಣಾ ಶಾಂತೇಶ್ವರ D) ಜಯಂತ ಕ್ಯಾಕಿಣಿ

46. ಇವರು ಕನ್ನಡದ 'ಪ್ರಾಯೋಗಿಕ ವಿಮರ್ಶೆ' ಕ್ಷೇತ್ರಕ್ಕೆ ಕೊಡುಗೆ ನೀಡಿದವರು

1) ಗಿರಡ್ಡಿ ಗೋವಿಂದರಾಜ 2) ಕೀರ್ತಿನಾಥ ಕುರ್ತಕೋಟಿ
3) ಪು.ತಿ. ನರಸಿಂಹಾಚಾರ್ 4) ಕುವೆಂಪು

ಸರಿಯಾದ ಉತ್ತರ

A) 1 ಮತ್ತು 2 B) 2 ಮತ್ತು 3 C) 1 ಮತ್ತು 3 D) 3 ಮತ್ತು 4

47. ಈಶ್ವರ ಕವಿ ರಚಿಸಿದ ಛಂದೋಗ್ರಂಥ

A) ಕವಿಜಿಹ್ವಾಬಂಧನ B) ಛಂದೋನುಶಾಸನ
C) ಛಂದೋಂಬುಧಿ D) ಛಂದಸ್ಸಾರ

48. 'ಕವಿಚೂತವನ ಚೈತ್ರ' ಎಂಬುದು 'ಕವಿಚೈತ್ರವನ ಚೂತ' ಎಂದು ಹಸ್ತಪ್ರತಿಗಳಲ್ಲಿದ್ದರೆ ಅದು ಯಾವ ವರ್ಗದ ಸ್ಖಾಲಿತ್ಯ?

A) ಪ್ರತಿನಿಧಾನ B) ದೂರಪುನರ್ಲೇಖನ
C) ಶಬ್ದಗಳ ಸ್ಥಾನವ್ಯತ್ಯಯ D) ಅಕ್ಷರಗಳ ಸ್ಥಾನವ್ಯತ್ಯಯ

49. ಐದು ಮಾತ್ರೆಗಳ ಗಣವಿನ್ಯಾಸವಿರುವ ಷಟ್ಪದಿ

A) ಶರ B) ಕುಸುಮ C) ಭೋಗ D) ಭಾಮಿನಿ

50. ಪರ್ವತವಾಣಿಯವರು ರಚಿಸಿದ ನಾಟಕ

A) ಉದರ ವೈರಾಗ್ಯ B) ಜೈಸಿದ ನಾಯಕ
C) ಆನಿ ಬಂತಾನಿ D) ಉಂಡಾಡಿಗುಂಡ

51. ಇವುಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ

A) ಕಾವ್ಯ ಕುತೂಹಲ : ಪು.ತಿ.ನ

B) ಶಕ್ತಿ ಶಾರದೆಯ ಮೇಳ : ಎಲ್.ಎಸ್. ಶೇಷಗಿರಿ ರಾವ್

C) ಸೌಂದರ್ಯ ಸಮೀಕ್ಷೆ : ಕುವೆಂಪು

D) ಸಮಕಾಲೀನ : ವಿಜಯಾ ದಬ್ಬೆ

52. ಇವುಗಳಲ್ಲಿ ಕಥಾ ಸಂಕಲನಗಳು

1) ಹೊಸಬೆಳಕು, ಆಕಾಶಗಂಗೆ

2) ಕಂಬನಿ ಮತ್ತು ಚಿಗುರು, ಹುಚ್ಚನ ಹೆಂಡತಿ

3) ರಕ್ತ ಸರೋವರ, ನಾಸ್ತಿಕ ಕೊಟ್ಟ ದೇವರು

4) ವಜ್ರಗಳು, ಒಡೆದ ದೋಣಿಯಲ್ಲಿ

ಸರಿಯಾದ ಉತ್ತರ

A) 1 ಮತ್ತು 2 B) 1 ಮತ್ತು 4 C) 2 ಮತ್ತು 3 D) 3 ಮತ್ತು 4

53. ಶೇಕ್ಸ್‌ಪಿಯರನ ಒಥೆಲೊ ನಾಟಕದ ಅನುವಾದ

A) ಬಿರುಗಾಳಿ B) ರಾಮವರ್ಮ ಲೀಲಾವತಿ

C) ಶೂರಸೇನ ಚರಿತೆ D) ರಕ್ತಾಕ್ಷಿ

54. ಎಣ್ಣೆ, ಅಭ್ಯಾಸ – ಈ ಪದಗಳಲ್ಲಿ ಕಾಲಾಂತರದಲ್ಲಿ ನಡೆದ ಅರ್ಥವ್ಯತ್ಯಾಸದ ಬಗೆ

A) ಅರ್ಥ ಸಂಕೋಚ B) ಅರ್ಥವಿಸ್ತಾರ

C) ಅರ್ಥಾಂತರ D) ಅರ್ಥೋತ್ಕರ್ಷ

55. 'ಕಾವ್ಯಕ್ಕೆ ರಸವೇ ಆತ್ಮ, ಆ ರಸಕ್ಕೆ ಔಚಿತ್ಯವೇ ಜೀವಿತ ಅಥವಾ ಪ್ರಾಣ' ಎಂದು ಹೇಳಿದ ಆಲಂಕಾರಿಕ?

A) ಕ್ಷೇಮೇಂದ್ರ B) ಭಾಮಹ C) ಮಮ್ಮಟ D) ಭರತ

56. ಇವುಗಳಲ್ಲಿ ಮಲ್ಲಿಕಾಮಾಲಾ ವೃತ್ತದ ಗಣವಿನ್ಯಾಸವನ್ನು ಹೊಂದಿರುವ ಸಾಲು

A) ಕರಿಕಳಭ ಪ್ರಚಂಡ ಮೃಗರಾಜಕಿಶೋರ ಕಠೋರ ಘೋರ ಹೂಂ

B) ಭಾಗವನಾಸೆಪಟ್ಟಳಿಪಿ ಬೇಟ್ಟುದು ನಿನ್ನಯ ಕಲ್ತ ವಿದ್ದೆ ನೀ

C) ಕಿಂಕುರ್ವಾಣಪ್ರವಣರರೆಬರ್ ಬರ್ಪಿನಂ ಕಾದು ತನ್ನಂ

D) ನೀರಜೋತ್ಪಲವರ್ಣನಾಡಿದ ನಾಡಿದಂ ಕಮಲೇಕ್ಷಣಂ

57. ಇವುಗಳಲ್ಲಿ ಅಸಂಗತ ನಾಟಕಗಳು

A) ವಿಗಡ ವಿಕ್ರಮರಾಯ, ಸಂಕ್ರಾಂತಿ B) ಗೋಕುಲ ನಿರ್ಗಮನ, ಕೀಚಕ

C) ಹಳ್ಳ ಕೊಳ್ಳಾ ನೀರು, ಮನೆ D) ತುಘ್ಲಕ್, ಮಹಾಮಾಯಿ

58. ಈ ಹೇಳಿಕೆಗಳನ್ನು ಗಮನಿಸಿರಿ

1) ನಟರು ಅಭಿನಯಿಸಿದಾಗ ಪ್ರೇಕ್ಷಕರಾದ ಸಹೃದಯರಲ್ಲಿ ರಸೋತ್ಪತ್ತಿ ಉಂಟಾಗುತ್ತದೆ.

2) ಸಂಚಾರಿ ಭಾವಗಳು ಮನುಷ್ಯನಲ್ಲಿ ಸುಪ್ತವಾಗಿ ಅಡಗಿರುತ್ತವೆ.

A) ಒಂದನೇ ಹೇಳಿಕೆ ಸರಿ; ಎರಡನೇ ಹೇಳಿಕೆ ತಪ್ಪು

B) ಒಂದನೇ ಹೇಳಿಕೆ ತಪ್ಪು, ಎರಡನೇ ಹೇಳಿಕೆ ಸರಿ

C) ಎರಡೂ ಹೇಳಿಕೆಗಳೂ ಸರಿ

D) ಎರಡೂ ಹೇಳಿಕೆಗಳೂ ತಪ್ಪು

59. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ?

A) ವಿಶ್ವನಾಥ : ರಸಾತ್ಮಕವಾದ ವಾಕ್ಯವು ಕಾವ್ಯ

B) ವಾಮನ : ಕಾವ್ಯಕ್ಕೆ ಧ್ವನಿಯೇ ಆತ್ಮ

C) ದಂಡಿ : ಹತ್ತು ಗುಣಗಳೇ ಕಾವ್ಯದ ಪ್ರಾಣ

D) ಜಗನ್ನಾಥ ಪಂಡಿತ : ರಮಣೀಯಾರ್ಥವನ್ನು ಪ್ರತಿಪಾದಿಸುವ ಶಬ್ದವೇ ಕಾವ್ಯ

60. 'ವಸ್ತು ಪ್ರತಿರೂಪ' ತತ್ತ್ವದ ಪ್ರತಿಪಾದಕ

A) ಕ್ರೋಚೆ B) ಹೊರೇಸ್ C) ಶೆಲ್ಲಿ D) ಟಿ.ಎಸ್. ಎಲಿಯಟ್

61. ತಲಕಾಡಿನ ಗಂಗರ ಶ್ರೇಷ್ಠ ಶಿಲ್ಪಕಲೆಗೆ ಒಂದು ಉದಾಹರಣೆ

A) ಬಾದಾಮಿಯ ಗುಹಾ ದೇವಾಲಯಗಳು

B) ಲಕ್ಕುಂಡಿಯ ವಿಶ್ವೇಶ್ವರ ದೇವಾಲಯ

C) ಕೋಲಾರದಲ್ಲಿರುವ ಕೋಲಾರಮ್ಮನ ದೇವಾಲಯ

D) ಬೇಲೂರು ಚನ್ನಕೇಶವ ದೇವಾಲಯ

62. ಇವುಗಳಲ್ಲಿ ಕನ್ನಡ ದೇಶ್ಯ ಪದಗಳು

1) ವಿಕೇಂದ್ರೀಕರಣ, ಆಕಾಶವಾಣಿ 2) ಹಾವು, ಮೊಲ

3) ಕಜ್ಜ, ಸಂಕಟ 4) ಬಯಕೆ, ಬಯಲು

ಸರಿಯಾದ ಉತ್ತರ

A) 1 ಮತ್ತು 3 B) 2 ಮತ್ತು 4 C) 1 ಮತ್ತು 2 D) 3 ಮತ್ತು 4

63. ದಲಿತ – ಬಂಡಾಯದ ಮುಖವಾಣಿಯಾದ ಪತ್ರಿಕೆ

A) ಸಂಕ್ರಮಣ B) ಜಯಂತಿ C) ಸುವಾಸಿನಿ D) ವಾಗ್ಭೂಷಣ

64. ಈಡಿಪಸ್ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದವರು

A) ಕೆ. ಮರುಳಸಿದ್ದಪ್ಪ B) ಎ.ಕೆ. ರಾಮಾನುಜನ್

C) ಗಿರಡ್ಡಿ ಗೋವಿಂದರಾಜ D) ಪಿ. ಲಂಕೇಶ್

65. ಇವುಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ

A) ಜೀವನ : ಡಿ.ವಿ.ಜಿ.

B) ಕಾವ್ಯ ಕಲಾನಿದಿ : ಕಡಂಗೋಡ್ಲು ಶಂಕರ ಭಟ್ಟ

C) ಜಯಂತಿ : ಬೆಟಗೇರಿ ಕೃಷ್ಣ ಶರ್ಮ

D) ಸುವಾಸಿನಿ : ಮಾಸ್ತಿ ವೆಂಕಟೇಶ ಅಯ್ಯಂಗಾರ್

66. ಯಾವುದು ನುಡಿಚಿತ್ರ

A) ಪತ್ರಿಕೆಗೆ ರಾಜಕೀಯ ಬದ್ಧತೆಯನ್ನು ಆರೋಪಿಸುವ ಲೇಖನ

B) ಆಸಕ್ತಿಯನ್ನು ಕೆರಳಿಸುವ ವಿಷಯದ ಆಕರ್ಷಕವಾದ ನಿರೂಪಣೆ

C) ಸುದ್ದಿಯೊಂದರ ವರದಿ

D) ಖಾಲಿ ಜಾಗವನ್ನು ಭರ್ತಿ ಮಾಡುವ ಸಲುವಾಗಿ ಬರೆಯಲಾದ ಲೇಖನ

67. ಇಂಟರ್ನೆಟ್ ಹುಟ್ಟಿದ್ದು ಯಾವ ದೇಶದಲ್ಲಿ

A) ಭಾರತ B) ಇಂಗ್ಲೆಂಡ್ C) ಆಸ್ಟ್ರೇಲಿಯಾ D) ಅಮೇರಿಕಾ

68. 'ಉದರ ವೈರಾಗ್ಯವಿದು ನಮ್ಮ । ಪದುಮನಾಭನಲಿ ತೀರ ಭಕುತಿಯಿಲ್ಲ' ಈ ಮಾತು ಯಾರ ಕೀರ್ತನೆಗಳಲ್ಲಿ ಕಂಡುಬರುತ್ತದೆ

A) ಕನಕದಾಸ B) ಶ್ರೀಪಾದರಾಯ C) ಪುರಂದರ ದಾಸ D) ವಿಜಯದಾಸರು

69. 'ಪ್ರಿನ್ಸಿಪಲ್ಸ್ ಆಫ್ ಲಿಟರರಿ ಕ್ರಿಟಿಸಿಸಮ್' ಗ್ರಂಥದ ಕರ್ತೃ

A) ಕೋಲ್‌ರಿಜ್ B) ವರ್ಡ್ಸ್‌ವರ್ತ್ C) ಲಾಂಜಿನಸ್ D) ಅರ್ನಾಲ್ಡ್

70. ಸರಿಯಾದ ಕಾಲಾನುಕ್ರಮವನ್ನು ಗುರುತಿಸಿರಿ

A) ವಿಶ್ವನಾಥ, ವಾಮನ, ಆನಂದವರ್ಧನ, ಮಮ್ಮಟ
B) ಮಮ್ಮಟ, ಆನಂದವರ್ಧನ, ವಿಶ್ವನಾಥ, ವಾಮನ
C) ಆನಂದವರ್ಧನ, ಮಮ್ಮಟ, ವಿಶ್ವನಾಥ, ವಾಮನ
D) ವಾಮನ, ಆನಂದವರ್ಧನ, ಮಮ್ಮಟ, ವಿಶ್ವನಾಥ

71. 'ಸದಾ ಸತ್ಯವನ್ನೇ ನುಡಿಯಿರಿ' – ಈ ವಾಕ್ಯದಲ್ಲಿರುವ ಕ್ರಿಯಾಪದ ಯಾವ ಅರ್ಥದಲ್ಲಿದೆ?

A) ಪ್ರೇರಣಾರ್ಥಕ B) ವಿಧ್ಯರ್ಥಕ C) ನಿಷೇಧಾತ್ಮಕ D) ಸಂಭಾವನಾರ್ಥಕ

72. ಇವು ಪುರುಷವಾಚಕ ಸರ್ವನಾಮಗಳು

1) ಅವನು ಮತ್ತು ಅವರು 2) ಯಾವುದು ಮತ್ತು ಯಾರು
3) ನಾನು ಮತ್ತು ನೀನು 4) ತಾನು ಮತ್ತು ಅವಳು

ಸರಿಯಾದ ಉತ್ತರ

A) 1 ಮತ್ತು 2 B) 3 ಮತ್ತು 4 C) 1 ಮತ್ತು 3 D) 2 ಮತ್ತು 4

73. ಇವುಗಳಲ್ಲಿ ಅನುವಾದಿತ ಕೃತಿಗಳು

A) ನಿಸರ್ಗ, ಮೃತ್ಯುಂಜಯ B) ಮಾಡಿದ್ದುಣ್ಣೋ ಮಹಾರಾಯ, ಶಾಪ
C) ಮಹಾಬ್ರಾಹ್ಮಣ, ಸಮಸ್ಯೆಯ ಮಗು D) ಚೌಕಟ್ಟಿನ ಮನೆ, ಕೆಂಪು ಮೀನು

74. ಇವುಗಳಲ್ಲಿ ಅರ್ಥಾಂತರಗೊಂಡ ಪದಗಳು

A) ಮರ್ಯಾದೆ, ಅಮ್ಮ B) ಎಣ್ಣೆ, ಸೀರೆ
C) ಶ್ರಾದ್ಧ, ಪೆದ್ದ D) ಕೂಳು, ದೇಗುಲ

75. ಇವುಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ?

A) ಎಲ್.ಎಸ್. ಶೇಷಗಿರಿ ರಾವ್ : ಪ್ರತಿ ಸಂಸ್ಕೃತಿ
B) ಸಿ.ಎನ್. ರಾಮಚಂದ್ರನ್ : ಸಾಹಿತ್ಯ ಕಥನ
C) ವಿ.ಎಂ. ಇನಾಂದಾರ್ : ಅರ್ಥಲೋಕ
D) ವಿಜಯಾ ದಬ್ಬೆ : ನಾರಿ–ನೆಲೆ–ದಿಗಂತ

76. ಎನಗೆ ಹಿತಂ ಬ್ರಾಹ್ಮಣನೀತನ್ ಎನ್ನದೆ ಅವಿವೇಕಿಯಾಗಿ ಶಿವಭೂತಿಗೆ ತೊಟ್ಟನೆ ಬಗೆದನಹಿತಮಂ ತದ್ವನಚರನ್ ಎಂತುಂ ಕೃತಘ್ನರೇನಂ ಮಾಡರ್ – ಇಲ್ಲಿರುವ ಅಲಂಕಾರ

A) ಉತ್ಪ್ರೇಕ್ಷಾಲಂಕಾರ B) ಅರ್ಥಾಂತರನ್ಯಾಸಾಲಂಕಾರ
C) ರೂಪಕಾಲಂಕಾರ D) ಉಪಮಾಲಂಕಾರ

77. ಕನ್ನಡದ ಮುಕ್ತ ಆಕೃತಿಮಾಗಳು

A) ಸ್ನೇಹ, ಪ್ರೀತಿ B) ಲಕುಮಿ, ವೃತ್ತಿ
C) ನೇಸರು, ತಿಂಗಳು D) ಜಮೀನು, ಖರೀದಿ

78. ಇವುಗಳಲ್ಲಿ ಜೋಡುನುಡಿ ಯಾವುದು

A) ಅವಳಿ ಜವಳಿ B) ಪಟಪಟನೆ C) ಗಂಜಿಗಿಂಜಿ D) ಹಣೆಗಣ್ಣು

79. 'ಮೊಲೆವಾಲಿನೊಡಗೂಡಿ ಬಂದ ನುಡಿ ತಾಯಿನುಡಿ; ಕೊಲೆಗೈದರಮ್ಮನನೆಕೊಲಿಸಿದಂತೆ' – ಈ ಸಾಲುಗಳಿರುವ ಕವಿತೆಯನ್ನು ಬರೆದವರು

A) ಬಿ.ಎಂ. ಶ್ರೀಕಂಠಯ್ಯ B) ಮಧುರಚೆನ್ನ
C) ಜಿ.ಪಿ. ರಾಜರತ್ನಂ D) ಕುವೆಂಪು

80. ಇವುಗಳಲ್ಲಿ ಕೃದಂತ ಭಾವನಾಮ

A) ಬಳೆಗಾರ B) ಹಿರಿತನ C) ಕುಣಿತ D) ಹಣವಂತ

81. ವಿಶೇಷಣ ಮತ್ತು ವಿಶೇಷ್ಯ ಸೇರಿ ಆಗುವ ಸಮಾಸ

A) ಅಂಶಿ B) ತತ್ಪುರುಷ C) ದ್ವಂದ್ವ D) ಕರ್ಮಧಾರಯ

82. 'ನುತ ಶಬ್ದಾಲಂಕಾರದೊಳತಿಶಯಂ ಕನ್ನಡಕ್ಕೆ ಸತತಂ ಪ್ರಾಸಂ' – ಈ ಮಾತು ಬರುವ ಗ್ರಂಥ

A) ಕವಿರಾಜ ಮಾರ್ಗ B) ಕಾವ್ಯಾವಲೋಕನ
C) ಕರ್ಣಾಟಕ ಭಾಷಾಭೂಷಣ D) ಕವಿಜಿಹ್ವಾಬಂಧನ

83. "... ಪಲಬರಂ ಬೆಸಗೊಳ್ಳದೆ ಪೋಗಿ ನೋಡ ಸುಂದರ ವೃಷಭಾಚಳೋನ್ನತ ಶಿಲಾತಳದೊಳ್ ಬರೆದಕ್ಕರಂಗಳಂ" – ಈ ಮಾತು ಬರುವ ಶಾಸನ

A) ಬೆಳತೂರಿನ ದೇಕಬ್ಬೆಯ ಶಾಸನ B) ಬಾದಾಮಿ ಶಾಸನ
C) ಜಿನವಲ್ಲಭನ ಗಂಗಾಧರಂ ಶಾಸನ D) ತಳಂಗೆರೆ ಶಾಸನ

84. 'ಆ ಮೂವರ್ ಕವಿಗಳ್ ಜಿನ ಸಮಯ ದೀಪಕರ್, ಪೆಱರೊಳರೇ' ಎಂಬ ಹೇಳಿಕೆಯಲ್ಲಿ ಬರುವ ಕವಿಗಳು

A) ಚಾವುಂಡರಾಯ, ರನ್ನ, ಜನ್ನ B) ಪಂಪ, ಪೊನ್ನ, ನಯಸೇನ
C) ನಾಗಚಂದ್ರ, ಜನ್ನ, ದುರ್ಗಸಿಂಹ D) ಪಂಪ, ಪೊನ್ನ, ರನ್ನ

85. ಸಿದ್ಧರಾಮನ ವಚನಗಳ ಅಂಕಿತ

A) ಗುಹೇಶ್ವರ B) ಕಪಿಲ ಸಿದ್ಧಮಲ್ಲಿಕಾರ್ಜುನ
C) ಕೂಡಲ ಚನ್ನಸಂಗಮದೇವ D) ರಂಗನಾಥ

86. ಕನಕದಾಸ ಬರೆದ ಕಾವ್ಯ

A) ಹರಿಭಕ್ತಿ ಸಾರ B) ಶ್ರೀಹರಿ ಚರಿತೆ
C) ಮಂತ್ರಗೋಪ್ಯ D) ಯೋಗಾಂಗ ತ್ರಿವಿಧಿ

87. 'ಬದುಕು' ಕಾದಂಬರಿಯನ್ನು ಬರೆದವರು

A) ಬೊಳುವಾರ್ ಮಹಮದ್ ಕುಂಞಿ B) ನಾ. ಮೊಗಸಾಲೆ
C) ಕುಂ. ವೀರಭದ್ರಪ್ಪ D) ಗೀತಾ ನಾಗಭೂಷಣ

88. 2024 ರಲ್ಲಿ ಕಣ್ಮರೆಯಾದ ಕನ್ನಡ ಕಾದಂಬರಿಕಾರರು

A) ಶ್ರೀಕೃಷ್ಣ ಆಲನಹಳ್ಳಿ B) ಕೆ.ಟಿ. ಗಟ್ಟಿ
C) ವೇಣುಗೋಪಾಲ ಕಾಸರಗೋಡು D) ವಿಜಯಾ ದಬ್ಬೆ

89. ಇವುಗಳಲ್ಲಿ ಜಂಬಣ್ಣ ಅಮರಚಿಂತ ಅವರ ಕವನ ಸಂಕಲನ

A) ಶೋಕಗೀತೆ B) ಕಾವ್ಯ ಬಂತು ಬೀದಿಗೆ
C) ಮಣ್ಣಲ್ಲಿ ಬಿರಿದ ಅಕ್ಷರ D) ಕಪ್ಪು ಕಾವ್ಯ

90. 'ರಸರತ್ನಾಕರ' ಗ್ರಂಥವನ್ನು ರಚಿಸಿದವರು

A) ಸಾಳ್ವ B) ಕುಂತಕ
C) ಎರಡನೇ ನಾಗವರ್ಮ D) ಶ್ರೀವಿಜಯ

91. ರುದ್ರಗಣದಲ್ಲಿರುವ ಬಗೆಗಳು

A) ಆರು B) ಎಂಟು C) ಹದಿನಾರು D) ಹದಿನೆಂಟು

92. ಕೆಲವು ದ್ರಾವಿಡ ಭಾಷೆಗಳಲ್ಲಿ ಕಾಣುವ ಘೋಷ ಮತ್ತು ಅಘೋಷ ಧ್ವನಿಮಾಗಳ ವಿನಿಮಯದ ಕುರಿತು ಮೊದಲು ಪ್ರಸ್ತಾಪಿಸಿದವರು

A) ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯ B) ಎಡ್ವರ್ಡ್ ಸಪೀರ್
C) ಟಿ. ಬರೊ D) ರಾಬರ್ಟ್ ಕಾಲ್ಡ್ವೆಲ್

93. ಎಂ.ಎಂ. ಕಲ್ಬುರ್ಗಿ ಅವರು ಬರೆದ ಗ್ರಂಥ

A) ಕರ್ಣನ ಮೂರು ಚಿತ್ರಗಳು B) ಶಾಸನಗಳಲ್ಲಿ ಶಿವಶರಣರು
C) ಪಾಶ್ಚಾತ್ಯ ಸಣ್ಣ ಕತೆಗಳು D) ದಿ ಹಿಸ್ಟರಿ ಆಫ್ ಕನ್ನಡ ಲಾಂಗ್ವೇಜ್

94. ಧ್ವನಿ ಸಿದ್ಧಾಂತದ ಪ್ರತಿಪಾದಕ

A) ಆನಂದವರ್ಧನ B) ವಾಮನ C) ರಾಜಶೇಖರ D) ಭರತ

95. ಕಟ್ಟ್ತೆ > ಕರ್ತೆ > ಕತ್ತೆ ; ಕೊರ್ಬು > ಕೊಬ್ಬು – ಇಲ್ಲಿ ಕಾಣುವ ಧ್ವನಿ ವ್ಯತ್ಯಾಸ

A) ಸ್ವರ ಪಲ್ಲಟ B) ಸಮರೂಪಧಾರಣೆ
C) ಆದಿ ಸ್ವರಾಗಮ D) ಅನುನಾಸಿಕೀಕರಣ

96. ಎಚ್.ಎಸ್. ಶಿವಪ್ರಕಾಶ್ ರಚಿಸಿದ ನಾಟಕ

A) ಏಕಲವ್ಯ B) ಶೋಕಚಕ್ರ C) ಮಕರಚಂದ್ರ D) ದಂಡಿ

97. ನಜಭಜಜಜರ – ಈ ಗಣ ವಿನ್ಯಾಸವುಳ್ಳ ಛಂದೋರೂಪ

A) ಮಲ್ಲಿಕಾಮಾಲೆ B) ಶಾರ್ದೂಲ ವಿಕ್ರೀಡಿತ
C) ಮಹಾಸ್ರಗ್ಧರೆ D) ಚಂಪಕಮಾಲೆ

98. ಇವು ಘೋಷ ಧ್ವನಿಮಾಗಳು

A) ಕ್, ಚ್, ಟ್, ತ್, ಪ್ B) ಙ್, ಞ್, ಣ್, ಲ್, ವ್
C) ಗ್, ಜ್, ಡ್, ದ್, ಬ್ D) ಖ್, ಛ್, ಠ್, ಥ್, ಫ್

99. ರುದ್ರ ಭಟ್ಟನ ಜಗನ್ನಾಥ ವಿಜಯದ ಸಾಹಿತ್ಯ ಪ್ರಕಾರ

A) ಚಂಪೂ B) ಸಾಂಗತ್ಯ ಕಾವ್ಯ C) ಗದ್ಯ ಕಾವ್ಯ D) ನಾಟಕ

100. ಮಧ್ಯ ದ್ರಾವಿಡ ಗುಂಪಿಗೆ ಸೇರಿದ ಭಾಷೆ

A) ಕುರುಖ್, ಬ್ರಾಹೂಈ, ಮಲ್ತೊ B) ಕೊಲಾಮಿ, ಪರ್ಜಿ, ಪೆಂಗೊ

C) ಕನ್ನಡ, ತಮಿಳು, ಮಲಯಾಳ D) ತುಳು, ತೆಲುಗು, ಇರುಳ

101. ಮಾತ್ರಾಗಣ ಪ್ರಧಾನವಾದ ಛಂದೋರೂಪ

A) ಮೂಲ ಷಟ್ಪದಿ B) ಪಿರಿಯಕ್ಕರ C) ಗೀತಿಕೆ D) ಕಂದ

102. ಮಿತ್ರವಿಂದಾ ಗೋವಿಂದ ನಾಟಕದ ಕರ್ತೃ

A) ತಿರುಮಲಾರ್ಯ B) ಚಿಕ್ಕದೇವರಾಜ

C) ಸಿಂಗರಾರ್ಯ D) ಮುಮ್ಮಡಿ ಕೃಷ್ಣರಾಜ

103. ಹಲಸಂಗಿ ಗೆಳೆಯರು ಸಂಪಾದಿಸಿದ ಜಾನಪದ ಕೃತಿ

A) ಜೀವನ ಜೋಕಾಲಿ B) ಗರತಿಯ ಹಾಡುಗಳು

C) ಹಳ್ಳಿಯ ಹಾಡುಗಳು D) ತಿಮ್ಮಕ್ಕನ ಪದಗಳು

104. ಈ ಹೇಳಿಕೆಗಳನ್ನು ಗಮನಿಸಿರಿ

1. ಡಿಸ್ಕವರಿಯ ಹಿಂದೆ ನಡೆಯುವ ಶೋಧ ಪ್ರಕ್ರಿಯೆ ಅನ್ವೇಷಣಾತ್ಮಕ ಸಂಶೋಧನೆ ಎನಿಸುತ್ತದೆ.
2. ಆವಿಷ್ಕರಣಾತ್ಮಕ ಸಂಶೋಧನೆ ಸಾಮಾನ್ಯವಾಗಿ ಕಲಾ, ಸಮಾಜ ವಿಜ್ಞಾನ ಕ್ಷೇತ್ರದಲ್ಲಿ ನಡೆಯುವ ಕ್ರಿಯೆಯಾಗಿದೆ.

A) ಎರಡು ಹೇಳಿಕೆಗಳೂ ಸರಿ

B) ಎರಡು ಹೇಳಿಕೆಗಳೂ ತಪ್ಪು

C) ಮೊದಲ ಹೇಳಿಕೆ ತಪ್ಪು; ಎರಡನೆಯದು ಸರಿ

D) ಮೊದಲ ಹೇಳಿಕೆ ಸರಿ; ಎರಡನೆಯದು ತಪ್ಪು

105. 'ಭಸ್ಮವ ಹೂಸಿ ಬತ್ತಲೆ ಇದ್ದರೇನು ಬ್ರಹ್ಮಚಾರಿಯೆ? ಅಶನವನುಂಡು ವ್ಯಸನವ ಮರೆದಡೇನು ಬ್ರಹ್ಮಚಾರಿಯೆ?' ಎಂದು ಹೇಳಿದ ವಚನಕಾರ.

A) ಸಿದ್ಧರಾಮ B) ಅಲ್ಲಮಪ್ರಭು

C) ಜೇಡರ ದಾಸಿಮಯ್ಯ D) ಚೆನ್ನಬಸವಣ್ಣ

106. 'ಭರತೇಶ ವೈಭವ' ಕೃತಿ ಯಾವ ಸಾಹಿತ್ಯ ಪ್ರಕಾರಕ್ಕೆ ಸೇರಿದೆ?

A) ಸಾಂಗತ್ಯ ಕಾವ್ಯ B) ಚಂಪೂ ಕಾವ್ಯ C) ಖಂಡ ಕಾವ್ಯ D) ಮಹಾ ಕಾವ್ಯ

107. ದ್ರಾವಿಡ ಭಾಷೆಗಳಲ್ಲಿ ಇದು ಸಹಜವಾಗಿ ಇಲ್ಲ

A) ಪಂಚಮಿ ವಿಭಕ್ತಿ B) ಕರ್ತರಿ ಪ್ರಯೋಗ

C) ಸಪ್ತಮಿ ವಿಭಕ್ತಿ D) ಸಂಬಂಧಾರ್ಥಕ ಸರ್ವನಾಮ

108. 'ಹರಕೆಯ ಕುರಿ' ಯಾವ ಸಾಹಿತ್ಯ ಪ್ರಕಾರಕ್ಕೆ ಸೇರಿದೆ?

A) ಕಾದಂಬರಿ B) ಸಣ್ಣಕತೆ C) ನಾಟಕ D) ಖಂಡಕಾವ್ಯ

109. ಕರ್ಣಪಾರ್ಯ ಕವಿ ರಚಿಸಿದ ಕಾವ್ಯ

A) ಕುಮಾರ ರಾಮನ ಕಥೆ B) ನೇಮಿನಾಥ ಪುರಾಣ
C) ಅಜಿತ ಪುರಾಣ D) ಸುಕುಮಾರ ಚರಿತೆ

110. 'ನೆಲಸುಗೆ ನಿನ್ನ ವಕ್ಷದೊಳೆ ನಿಚ್ಚಳಂ ಈ ಭಟಖಡ್ಗಮಂಡಲೋತ್ಪಲವನ ವಿಭ್ರಮ ಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ' ಈ ಮಾತನ್ನಾಡುವ ಪಾತ್ರ

A) ಬಾಹುಬಲಿ B) ಭರತ C) ವಜ್ರಜಂಘ D) ಪುರುದೇವ

111. ಇವುಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ?

A) ಎಂಕುಲು, ನಮೊ – ತಮಿಳು B) ನಾಮ್, ನಾಂಗಳ್ – ಕೊಡವ
C) ನೇಮು, ಮನಮು – ಮಲಯಾಳ D) ಎನಿಮಿದಿ, ತೊಮ್ಮಿದಿ – ತೆಲುಗು

112. ಇವುಗಳಲ್ಲಿ ಕನ್ನಡ ಲಾಕ್ಷಣಿಕರು ರಚಿಸಿದ ಕಾವ್ಯ ಲಕ್ಷಣ ಗ್ರಂಥಗಳು
1) ರಸರತ್ನಾಕರ 2) ಕಾವ್ಯಾಲಂಕಾರ 3) ಧ್ವನ್ಯಾಲೋಕ 4) ಉದಯಾದಿತ್ಯಾಲಂಕಾರ
ಸರಿಯಾದ ಉತ್ತರ

A) 1 ಮತ್ತು 2 B) 2 ಮತ್ತು 3 C) 1 ಮತ್ತು 4 D) 3 ಮತ್ತು 4

113. ಇವುಗಳಲ್ಲಿ ಪುರಂದರ ದಾಸರ ಕೀರ್ತನೆಗಳ ಸಾಲುಗಳು
1) ಹೊಲೆಯ ಹೊರಗಿಹನೆ ಊರೊಳಗಿಲ್ಲವೆ
2) ಧರ್ಮವೇ ಜಯವೆಂಬ ದಿವ್ಯ ಮಂತ್ರ
3) ಏನೂ ಇಲ್ಲದ ಎರಡು ದಿನದ ಸಂಸಾರ
4) ತನು ನಿನ್ನದು ಜೀವನ ನಿನ್ನದು
ಸರಿಯಾದ ಉತ್ತರ

A) 1 ಮತ್ತು 2 B) 3 ಮತ್ತು 4 C) 1 ಮತ್ತು 3 D) 2 ಮತ್ತು 4

114. 'ಕಾವ್ಯ ಕಾರಣ' ಲೇಖನ ಸಂಕಲನದ ಕರ್ತೃ

A) ಡಿ.ಆರ್. ನಾಗರಾಜ B) ಕೆ.ವಿ. ತಿರುಮಲೇಶ್
C) ಸಿ.ಎನ್. ರಾಮಚಂದ್ರ D) ಜಿ.ಎಸ್. ಅಮೂರ

115. ನಾ. ಮೊಗಸಾಲೆ ಅವರ ಕಾದಂಬರಿ

A) ಹದ್ದು B) ಶಿಕಾರಿ C) ಗೋದಾವರಿ D) ಬಂಡಾಯ

116. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ?

A) ಕರ್ನಾಟಕ ಜನಪದ ಕಥೆಗಳು : ಪಿ.ಕೆ. ರಾಜಶೇಖರ
B) ಹಾಡುಂಟೆ ನನ್ನ ಮಡಿಲಲ್ಲಿ : ಸಿಂಪಿ ಲಿಂಗಣ್ಣ
C) ಬಯಲು ಸೀಮೆಯ ಲಾವಣಿಗಳು : ಕಾಳೇಗೌಡ ನಾಗವಾರ
D) ಮಲೆಯ ಮಾದೇಶ್ವರ : ಎಲ್.ಆರ್. ಹೆಗಡೆ

117. ಒಂದು ಭಾಷೆಯ ಉಚ್ಚಾರದ ಅತಿಸಣ್ಣ ಘಟಕ

A) ಶಬ್ದ B) ಧ್ವನಿಮಾ C) ಆಕೃತಿಮಾ D) ಪ್ರತ್ಯಯ

118. ಇದು ಸತಿಸಹಗಮನವನ್ನು ಹೊಗಳುವ ಶಾಸನ

| | | | |
|---|---|---|---|
| A) | ಬಾದಾಮಿ ಶಾಸನ | B) | ಲಕ್ಕುಂಡಿ ಶಾಸನ |
| C) | ಗಂಗಾಧರಂ ಶಾಸನ | D) | ಬೆಳತೂರಿನ ದೇಕಬ್ಬೆಯ ಶಾಸನ |

119. ಇವುಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ?

| | | | |
|---|---|---|---|
| A) | ಬೆಟ್ಟಕ್ಕೆ ಚಳಿಯಾದಡೆ ಏನ ಹೊದ್ದಿಸುವರಯ್ಯ | : | ಚನ್ನಬಸವಣ್ಣ |
| B) | ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು ಬಂದರೂ ಸಮಾಧಾನಿಯಾಗಿರಬೇಕು | : | ಅಕ್ಕ ಮಹಾದೇವಿ |
| C) | ಭಕ್ತನಾದರೆ ಬಸವಣ್ಣನಾಗಬೇಕು, ಜಂಗಮನಾದರೆ ಪ್ರಭುವಿನಂತಾಗಬೇಕು | : | ಸಿದ್ಧರಾಮ |
| D) | ಕುಂಬಳದ ಕಾಯಿಗೆ ಕಬ್ಬಿಣದ ಕಟ್ಟು ಕೊಟ್ಟರೆ ಬಲುಹಾಗಬಲ್ಲುದೆ | : | ಬಸವಣ್ಣ |

120. ಈ ಪದ್ಯ ಪಾದವು ಯಾವ ಛಂದೋರೂಪಕ್ಕೆ ಉದಾಹರಣೆಯಾಗಿದೆ?
ಕೂಡೆ ವಿರೋಧಿಯಂ ತಱಿದು ತದ್ವಶಮಾಂಸದೆ ಭೂತಭೋಜನಂ

| | | | |
|---|---|---|---|
| A) | ಚಂಪಕಮಾಲೆ | B) | ಉತ್ಪಲಮಾಲೆ |
| C) | ಸ್ರಗ್ಧರೆ | D) | ಶಾರ್ದೂಲ ವಿಕ್ರೀಡಿತ |